OS 85/2021

PW-1

ದಿನಾಂಕಃ **28.06.2022** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ. ಪಿ.ವಿ.ವೈ ವಕೀಲರಿಂದಃ**

ನನ್ನ ತಂದೆಯವರ ತಾಯಿ ಹಾಗೂ ಪ್ರತಿವಾದಿ ಲಕ್ಷ್ಮೀದೇವಮ್ಮ ಸ್ವಂತ ಅಕ್ಕ ತಂಗಿ. ದಾವಾ ಸ್ವತ್ತು ಈಗಲೂ ಪ್ರತಿವಾದಿ ಲಕ್ಷ್ಮೀದೇವಮ್ಮ ನವರ ಮಾಲೀಕತ್ವದಲ್ಲಿ ಮತ್ತು ಸ್ವಾಧೀನದಲ್ಲಿ ಇದೆ ಎಂದರೆ ಸರಿ. ದಿಃ 09.09.2020 ರಂದು ಅಗ್ರಿಮೆಂಟ ಬರೆಸಲಾಗಿರುತ್ತದೆ. ಅದನ್ನು ಪಾವಗಡದಲ್ಲಿಯೇ ಬರೆಸಿದ್ದು, ಆ ವೇಳೆ ನಾನು, ನನ್ನ ತಮ್ಮ ಪಿ.ಸಿ.ಸೋಮನಾಥ, ಲಕ್ಷ್ಮೀದೇವಮ್ಮ, ಗೋವಿಂದಪ್ಪ, ಹೆಚ್ ಎನ್ ಅಶೋಕ ಮತ್ತು ಶಿವಣ್ಣ ಇದ್ದೆವು. ಅಗ್ರಿಮೆಂಟ ಬರೆಸಲು ಸ್ಟಾಂಪ್ ಪೇಪರನ್ನು ಯಾರು ತಂದರು ಎಂದರೆ ಸಾಕ್ಷಿ ನನ್ನ ತಮ್ಮ ಪಿ ಸಿ ಸೋಮನಾಥ ತಂದರು ಎಂದು ಉತ್ತರಿಸುತ್ತಾರೆ. ಸದರಿ ಸ್ಟಾಂಪ್ ಪೇಪರನ್ನು ದಿಃ 27.08.2020 ರಂದು ತಂದಿದ್ದರು. ಅಂದರೆ ದಿಃ 09.09.2020 ರಂದು ಲಕ್ಷ್ಮೀದೇವಮ್ಮ ಕರಾರು ಪತ್ರ ಬರೆಯುವುಕ್ಕಿಂತ ಮುಂಚೆಯೇ ಸ್ಟಾಂಪ್ ಪೇಪರನ್ನು ತೆಗೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಅಗ್ರಿಮೆಂಟ ಬರೆಸಿಕೊಳ್ಳುವ ದಿನ ಲಕ್ಷ್ಮೀದೇವಮ್ಮನವರಿಗೆ ಇಬ್ಬರೂ ಹೆಣ್ಣು ಮಕ್ಕಳು ಮತ್ತು ಒಬ್ಬ ಮಗ ಇರುವ ವಿಚಾರ ನಿಮಗೆ ಗೊತ್ತಿತ್ತು ಎಂದರೆ ಸಾಕ್ಷಿ ಗೊತ್ತಿತ್ತು ಎಂದು ಉತ್ತರಿಸುತ್ತಾರೆ. ನೀವು ಕರಾರು ಬರೆಸಿಕೊಳ್ಳುವ ಕಾಲಕ್ಕೆ ನಿಮ್ಮ ಮಕ್ಕಳನ್ನು ಕರೆಸುವಂತೆ ಮತ್ತು ಅಗ್ರಿಮೆಂಟಗೆ ಸಹಿ ಮಾಡಿಸುವಂತೆ ನೀವೇನು ಕೇಳಲಿಲ್ಲವಾ ಎಂದರೆ ಸಾಕ್ಷಿ ಕೇಳಿದ್ದೇನೆ ಎಂದು ಉತ್ತರಿಸುತ್ತಾರೆ. ಅದಕ್ಕೆ ಅವರು ಏನು ಹೇಳಿದರು ಎಂಬ ಪ್ರಶ್ನೆಗೆ ಸಾಕ್ಷಿ ಅವರು ಬೇಡ ಇದು ನನ್ನ ಸ್ವಂತ ಸಂಪಾದನೆ ಅವರ ಅವಶ್ಯಕತೆ ಇಲ್ಲ ಎಂದು ಹೇಳಿದರು ಎಂದು ಉತ್ತರಿಸುತ್ತಾರೆ. ಹಾಗಾಗಿ ನಾವು ಅವರುಗಳ ಸಹಿಯನ್ನು ಹಾಕಿಸಿಕೊಳ್ಳಲಿಲ್ಲ. ದಾವಾ ಆಸ್ತಿ ಲಕ್ಷ್ಮೀದೇವಮ್ಮನವರ ಸ್ವಂತ ಸಂಪಾದನೆಯಲ್ಲ, ಕುಟುಂಬದ ಎಲ್ಲರ ಸಂಪಾದನೆಯಿಂದ ಅವರ ಹೆಸರಿಗೆ ಖರೀದಿ ಮಾಡಲಾಗಿತ್ತು ಎಂದರೆ ಸಾಕ್ಷಿ ಸುಳ್ಳು ಎಂದು

ಉತ್ತರಿಸುತ್ತಾರೆ. ಲಕ್ಷ್ಮೀದೇವಮ್ಮ ನವರ ಮಗ ಗಂಗಾಧರಯ್ಯ ರವರು ಮಿಲಿಟರಿಯಲ್ಲಿ ಕೆಲಸ ಮಾಡುತ್ತಿದ್ದು ಅದರಿಂದ ಬಂದ ಸಂಪಾದನೆಯಿಂದ ಅವರ ತಾಯಿ ಲಕ್ಷ್ಮೀದೇವಮ್ಮ ನವರ ಹೆಸರಿಗೆ ಆ ಸ್ವತ್ತನ್ನು ಖರೀದಿಸಲಾಗಿತ್ತು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ.

ಲಕ್ಷ್ಮೀದೇವಮ್ಮ ನವರನ್ನು ಯಾರು ಕರೆದುಕೊಂಡು ಬಂದಿದ್ದರು ಎಂದರೆ ಸಾಕ್ಷಿ ಅವರೇ ಬಂದಿದ್ದರು ಎಂದು ಉತ್ತರಿಸುತ್ತಾರೆ. ಅವರಿಗೆ ಬಸ್ಸು ಹತ್ತಲು ಆಗುತ್ತಿರಲಿಲ್ಲ, ಹಾಗಾಗಿ ಪ್ರಸಾದ್ ರವರ ಮಾರುತಿ 800 ಕಾರಿನಲ್ಲಿ ಬಂದರು. ಪ್ರಸಾದ್ ರವರು ನಿಮ್ಮ ಪಕ್ಕದ ಮನೆಯವರಾ ಎಂದರೆ ಸಾಕ್ಷಿ ಎರಡು ಸಂದುಗಳು ಬಿಟ್ಟು ಮನೆಯಲ್ಲಿ ವಾಸ ಇದ್ದಾರೆ ಎಂದು ಉತ್ತರಿಸುತ್ತಾರೆ. ಲಕ್ಷ್ಮೀದೇವಮ್ಮ ಈಗಲೂ ದಾವಾ ಸ್ವತ್ತಿನ ಮನೆಯಲ್ಲಿಯೇ ವಾಸ ಇದ್ದಾರಾ ಎಂದರೆ ಸಾಕ್ಷಿ ಅಗ್ರಿಮೆಂಟ ಆಗುವವರೆಗೂ ವಾಸ ಇದ್ದರೂ ಆ ನಂತರ ಆ ಮನೆಯಲ್ಲಿ ಅವರು ಕಾಣಿಸುತ್ತಿಲ್ಲ ಹಾಗಾಗಿ ಈ ಕೇಸನ್ನು ಹಾಕಿದ್ದೇವೆ ಎಂದು ಉತ್ತರಿಸುತ್ತಾರೆ. ಲಕ್ಷ್ಮೀದೇವಮ್ಮವರನ್ನು ಕರೆದುಕೊಂಡು ಬರುವಂತೆ ನೀವು ಪ್ರಸಾದ್ ರವರಿಗೆ ಹೇಳಿದಿರಾ ಅಥವಾ ಲಕ್ಷ್ಮೀದೇವಮ್ಮನವರೇ ಪ್ರಸಾದ್ ರವರ ಜೊತೆ ಬಂದರಾ ಎಂದರೆ ಸಾಕ್ಷಿ ಅವರೇ ಪ್ರಸಾದ್ ರವರ ಜೊತೆ ಬಂದರು ಎಂದು ಉತ್ತರಿಸುತ್ತಾರೆ. ಪ್ರಸಾದ್ ರವರ ಮನೆ ಮತ್ತು ಅವರ ಪರಿಚಯ ನನಗೆ ಚೆನ್ನಾಗಿ ಗೊತ್ತಿದೆ. ಪ್ರಸಾದ್ ರವರು ತಂದ ಕಾರು ಅವರ ಕುಟುಂಬದ ಕಾರು, ಯಾರ ಹೆಸರಿನಲ್ಲಿ ಇದೆ ಎಂದು ಗೊತ್ತಿಲ್ಲ. ಪ್ರಸಾದ್ ರವರ ತಂದೆಯ ಹೆಸರು ರಾಮಚಂದ್ರಪ್ಪ. ಪ್ರಸಾದ್ ರವರ ಮನೆಯ ವಿಳಾಸ ಸಿ ವಿಭಾಗ ವೈ.ಎನ್.ಹೊಸಕೋಟೆ.

ಲಕ್ಷ್ಮೀದೇವಮ್ಮವರಿಗೆ ಮಕ್ಕಳು ಇರುತ್ತಾರೆ. ಅವರ ಹೆಸರು ಗಂಗಾಧರಯ್ಯ, ಅನುಸೂಯಮ್ಮ, ಜಯಕೀರ್ತಿ ಮತ್ತು ರತ್ನಮ್ಮ. ಲಕ್ಷ್ಮೀದೇವಮ್ಮವರ ಗಂಡನ ಹೆಸರು ದೇವಗಾನಹಳ್ಳಿ ರಾಮಪ್ಪ ಎಂದು. ರಾಮಪ್ಪ ಸುಮಾರು 4 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ದೇವಗಾನಹಳ್ಳಿ ರಾಮಪ್ಪ ಅಲಿಯಾಸ ಪೂಜಾರಿ ರಾಮಪ್ಪ ರವರು 2014 ರಲ್ಲಿ ತೀರಿಕೊಂಡಿದ್ದಾರೆ

ಎಂದರೆ ಸಾಕ್ಷಿ ಇರಬಹುದು ಎಂದು ಉತ್ತರಿಸುತ್ತಾರೆ. ಲಕ್ಷ್ಮೀದೇಮ್ಮ ರವರ ಮಗ ಗಂಗಾಧರಯ್ಯ ಸಹ ತೀರಿಕೊಂಡಿದ್ದಾರೆ, ಇವರು ರಾಮಪ್ಪ ರವರಿಗಿಂತ 2 ವರ್ಷ ಮುಂಚೆ ತೀರಿಕೊಂಡಿದ್ದಾರೆ. 2014 ರಲ್ಲಿ ಲಕ್ಷ್ಮೀದೇವಮ್ಮ ನವರ ಗಂಡ ರಾಮಪ್ಪ ತೀರಿಕೊಂಡ ನಂತರ ಅವರು ಅದೇ ಮನೆಯಲ್ಲಿಯೇ ವಾಸವಾಗಿದ್ದರು.

ನಿಪಿ.1 ಕ್ರಯದ ಕರಾರು ಪತ್ರದಲ್ಲಿ ಕಾಣುವ ಹೆಬ್ಬೆ ಟ್ಟಿನ ಗುರುತು ಲಕ್ಷ್ಮೀದೇವಮ್ಮ ನವರದೇ ಎಂದು ಗುರುತಿಸಿ ಬೀಕ್ಲಂದಾರರಾಗಲೀ ಅಥವಾ ಯಾರೇ ಆಗಲೀ ಎಲ್.ಟಿ.ಎಂ ಎಂದು ಗುರುತಿಸಿದ್ದಾರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಯಾವುದಾದರೂ ಪತ್ರಕ್ಕೆ ಯಾರದೋ ಹೆಬ್ಬೆಟ್ಟಿನ ಗುರುತು ಹಾಕಿ ಹಾಜರುಪಡಿಸಿದರೆ ಆಗುತ್ತದೆಯಾ ಎಂದರೆ ಸಾಕ್ಷಿ ಆ ರೀತಿ ತಪ್ಪು ಮಾಡಿದರೆ ಶಿಕ್ಷೆಯಾಗುತ್ತದೆ ಎಂದು ಉತ್ತರಿಸುತ್ತಾರೆ. ನಿಪಿ.1 ರಲ್ಲಿ ನೀವು ಲಕ್ಷ್ಮೀದೇವಮ್ಮ ನವರ ಹೆಬ್ಬೆಟ್ಟು ಎಂದು ಯಾರದೋ ಹೆಬ್ಬೆಟ್ಟಿನ ಗುರುತು ಹಾಕಿಸಿ ಪತ್ರವನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಿ ಹಾಗಾಗಿಯೇ ಹೆಬ್ಬೆಟ್ಟಿನ ಗುರುತು ಎಲ್.ಟಿ.ಎಂ ಎಂದು ಯಾರು ಗುರುತಿಸಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. 2014 ರಲ್ಲಿ ಲಕ್ಷ್ಮೀದೇವಮ್ಮ ನವರ ಗಂಡ ರಾಮಪ್ಪ ತೀರಿಕೊಂಡ ನಂತರ ಅವರ ಮಗ ಜಯಕೀರ್ತಿ ತುಮಕೂರಿನ ತಮ್ಮ ಮನೆಗೆ ಕರೆದುಕೊಂಡು ಹೋಗಿ ಇರಿಸಿಕೊಂಡಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಂತರ ಜಯಕೀರ್ತಿ ರವರು ದಿಃ 24.07.2020 ರಂದು ಶಾರದಾಂಬಾ ಟ್ರಸ್ಟ ತುಮಕೂರು ರವರು ನಡೆಸುತ್ತಿರುವ ವೃದ್ಧಾಶ್ರಮದಲ್ಲಿ ಲಕ್ಷ್ಮೀದೇವಮ್ಮ ನವರನ್ನು ಇರಿಸಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ದಿಃ 24.07.2020 ರಿಂದ ಈವರೆಗೂ ಲಕ್ಷ್ಮೀದೇವಮ್ಮ ನವರು ಮೇಲೆ ಹೇಳಿದ ವೃದ್ಧಾಶ್ರಮದಲ್ಲಿಯೇ ಇದ್ದಾರೆ ಎಂದರೆ ಸಾಕ್ಷಿ ಸುಳ್ಳು, ಅಗ್ರಿಮೆಂಟ ಮಾಡಿಕೊಡುವಾಗ ಇಲ್ಲಿಯೇ ಇದ್ದರು ಎಂದು ಉತ್ತರಿಸುತ್ತಾರೆ. 2014 ರಲ್ಲಿ ಲಕ್ಷ್ಮೀದೇವಮ್ಮ ನವರ ಗಂಡ ರಾಮಪ್ಪ ತೀರಿಕೊಂಡ ನಂತರದಿಂದ ಲಕ್ಷ್ಮೀದೇವಮ್ಮನವರು ವೈ.ಎನ್.ಹೊಸಕೋಟೆ ಗ್ರಾಮಕ್ಕೆ ಬಂದೇ ಇಲ್ಲ

ಎಂದರೆ ಸಾಕ್ಷಿ ಸುಳ್ಳು , ಅಲ್ಲಿಯೇ ಇದ್ದರು ಎಂದು ಉತ್ತರಿಸುತ್ತಾರೆ. ಆ ದಿನ ಪ್ರಸಾದ್ ಎನ್ನುವವರಾಗಲೀ, ಲಕ್ಷ್ಮೀದೇವಮ್ಮ ನವರಾಗಲೀ ಬಂದೇ ಇಲ್ಲ, ನೀವು, ನಿಮ್ಮ ತಮ್ಮ ಹಾಗೂ ಸಾಕ್ಷಿದಾರರಾಗಿ ಸಹಿ ಮಾಡಿರುವವರು ಎಲ್ಲರೂ ಸೇರಿ ಕೃತಕವಾಗಿ ಆ ದಾಖಲಾತಿಯನ್ನು ಸೃಷ್ಟಿ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ, ಅದು ಒರಿಜಿನಲ್ ಡಾಕುಮೆಂಟ್ ಎಂದು ಉತ್ತರಿಸುತ್ತಾರೆ. ದಿಃ 09.09.2020 ರಲ್ಲಿ ಲಕ್ಷ್ಮೀದೇವಮ್ಮನವರು ಆಶ್ರಮದಲ್ಲಿಯೇ ಇದ್ದರು ಎಂದು ಮತ್ತು ಆ ದಿನ ಅವರನ್ನು ಯಾರು ಬೇಟಿ ಮಾಡಿಲ್ಲ ಎಂದು ದೃಡೀಕರಣ ಪತ್ರ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಅದು ಸುಳ್ಳು ದಾಖಲಾತಿ ಎಂದು ಉತ್ತರಿಸುತ್ತಾರೆ.

ಸಾಮಾನ್ಯವಾಗಿ ಯಾವುದೇ ದಾಖಲಾತಿಗೆ ಒಬ್ಬ ವ್ಯಕ್ತಿ ಹೆಬ್ಬೆಟ್ಟಿನ ಗುರುತು ಹಾಕಿದಾಗ ಬೆರಳಿನ ಗುರುತು ನೇರವಾಗಿ ಇರುತ್ತದೆಯಾ ಅಥವಾ ಅಡ್ಡವಾಗಿ ಇರುತ್ತದೆಯಾ ಎಂದರೆ ಸಾಕ್ಷಿ ಅಡ್ಡವಾಗಿ ಇರುತ್ತದೆ ಎಂದು ಉತ್ತರಿಸುತ್ತಾರೆ. ಲಕ್ಷ್ಮೀದೇವಮ್ಮನವರು ನಿಮ್ಮಿಂದ ಯಾವುದೇ ರೂ.6 ಲಕ್ಷ ಮುಂಗಡ ಹಣವನ್ನು ಪಡೆದಿಲ್ಲ, ಅಗ್ರಿಮೆಂಟನ್ನು ಬರೆದುಕೊಟ್ಟಿಲ್ಲ, ಅವರು ನಿಮ್ಮನ್ನು ನೋಡಿಯೇ ಇಲ್ಲ ಎಂದರೆ ಸಾಕ್ಷಿ ಸುಳ್ಳು, ರೂ.6 ಲಕ್ಷ ಹಣ ಪಡೆದು ಅಗ್ರಿಮೆಂಟ್ ಬರೆದುಕೊಟ್ಟಿದ್ದಾರೆ ಮತ್ತು ನನ್ನನ್ನು ನೋಡಿದ್ದಾರೆ ಎಂದು ಉತ್ತರಿಸುತ್ತಾರೆ. ನೀವು ಕೃತಕವಾಗಿ ದಾಖಲಾತಿಯನ್ನು ಸೃಷ್ಟಿ ಮಾಡಿದ್ದೀರಿ ಎಂದು ಲಕ್ಷ್ಮೀದೇವಮ್ಮ ನವರ ಮಗ ಜಯಕೀರ್ತಿ ವೈ.ಎನ್‌ಹೊಸಕೋಟೆ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು ಎಂದರೆ ಸಾಕ್ಷಿ ದೂರು ಕೊಟ್ಟಿದ್ದರು ಎಂದು ಉತ್ತರಿಸುತ್ತಾರೆ. ಪೋಲಿಸ್ ಠಾಣೆಯಲ್ಲಿ ಈ ಪ್ರಕರಣ ಸಿವಿಲ್ ಸ್ವರೂಪ ಪ್ರಕಾರಣವಾಗಿದೆ ಹಾಗಾಗಿ ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಂಡು ಆ ನಂತರ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದರು ಎಂದರೆ ಸರಿ. ಲಕ್ಷ್ಮೀದೇವಮ್ಮ ನವರಿಗೆ ಸುಮಾರು 90 ವರ್ಷ ವಯಸ್ಸು ಆಗಿರುವ ಕಾರಣ ಆಕೆಗೆ ಓಡಾಡಲು ಮತ್ತು ಯಾವುದೇ ಕೆಲಸ ಮಾಡಲು ಆಗುವುದಿಲ್ಲ

OS 85/2021

PW-1

ಹಾಗಾಗಿಯೇ ಅವರನ್ನು ವೃದ್ದಾಶ್ರಮದಲ್ಲಿ ಸೇರಿಸಲಾಗಿದೆ ಎಂದರೆ ಸಾಕ್ಷಿ ಸುಳ್ಳು, ಆರೋಗ್ಯವಾಗಿದ್ದಾರೆ ಎಂದು ಉತ್ತರಿಸುತ್ತಾರೆ.

ವಿನಂತಿಯ ಮೇರೆಗೆ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು.

(**ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.